**** ಶಿಕ್ಷಣದಲ್ಲಿನ ಎಲ್ಲರ ಉತ್ಸಾಹ : ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ****

**ದ.ಕ.ಜಿಲ್ಲಾ ಪಂಚಾಯತ್ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು (ಆಡಳಿತ) ಕಛೇರಿ, ಮಂಗಳೂರು**

ಸಂ:ಎ4/ಪ್ರ.ಸ್ಪ.ಅ/01/2018-19 ದಿನಾಂಕ:05-07-2018

**ಜ್ಞಾಪನಾ**

ವಿಷಯ:- ಪ್ರೌಢಶಾಲಾ ಮಕ್ಕಳಿಗೆ ಜಿಲ್ಲಾಮಟ್ಟದ ಪ್ರಬಂಧ ಸ್ಪರ್ಧೆಯನ್ನು ನಡೆಸಲು ಅನುಮತಿ ನೀಡುವ ಕುರಿತು.

ಉಲ್ಲೇಖ: ಸಂಚಾಲಕರು, ಶ್ರೀ ಗುರುದೇವ ವಿದ್ಯಾಪೀಠ ಒಡಿಯೂರು, ಶ್ರೀ ಗುರುದೇವದತ್ತ ಸಂಸ್ಥಾನ, ಒಡಿಯೂರು, ಕರೋಪಾಡಿ, ಬಂಟ್ವಾಳ ತಾಲೂಕು ಇವರ ಪತ್ರ ದಿನಾಂಕ: 26-06-2018

*****

ಪರಮಪೂಜ್ಯ ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿಗಳರವರ ಹುಟ್ಟುಹಬ್ಬವನ್ನು ಸಾಮಾಜಿಕ ಹಿತದ ಗ್ರಾಮ ಸ್ವಚ್ಛತೆ, ಆರ್ಥಿಕವಾಗಿ ಹಿಂದುಳಿದವರಿಗೆ ಮನೆ ನಿರ್ಮಾಣ, ಔಷಧೀಯ ಗಿಡ ಬೆಳೆಸುವಿಕೆ ಇನ್ನಿತ್ಯಾದಿ ಧ್ಯೇಯೋದ್ದೇಶಗಳೊಂದಿಗೆ ಹಲವಾರು ವರ್ಷಗಳಿಂದ 'ಗ್ರಾಮೋತ್ಸವ'ವಾಗಿ ಆಚರಿಸಲ್ಪಡುತ್ತಿದೆ. ಈ ಪ್ರಯುಕ್ತ ಪ್ರಸಕ್ತ ವರ್ಷ ದಿನಾಂಕ:08.08.2018ರಂದು ಆಚರಿಸಲ್ಪಡುವ ಈ ಗ್ರಾಮೋತ್ಸವದಲ್ಲಿ ಮಕ್ಕಳಲ್ಲಿ ಸಾಮಾಜಿಕ ಜಾಗೃತಿಯನ್ನುಂಟು ಮಾಡುವ ನಿಟ್ಟಿನಲ್ಲಿ ಪ್ರೌಢಶಾಲಾ ಮಕ್ಕಳಿಗೆ (8ರಿಂದ 10ನೇ ತರಗತಿ) **'ದುಶ್ಚಟಮುಕ್ತ ಭಾರತ-ವಿದ್ಯಾರ್ಥಿಗಳ ಪಾತ್ರ'** ಈ ವಿಷಯದ ಕುರಿತು ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲು ನಿರ್ಧರಿಸಲಾಗಿದೆ. ಅದುದರಿಂದ ಈ ಸ್ಪರ್ದೆಯನ್ನು ನಡೆಸಲು ಅನುಮತಿ ನೀಡುವಂತೆ ಉಲ್ಲೇಖ ಪತ್ರದಲ್ಲಿ ಕೋರಿರುತ್ತಾರೆ.

ಶ್ರೀ ಗುರುದೇವಾನಂದ ಸ್ವಾಮೀಜಿಗಳರವರ ಹುಟ್ಟುಹಬ್ಬದ ಪ್ರಯುಕ್ತ ಪ್ರಬಂಧ ಸ್ಪರ್ಧೆಯನ್ನು ದ.ಕ ಜಿಲ್ಲೆಯ ಎಲ್ಲಾ ಪ್ರೌಢಶಾಲೆಗಳಲ್ಲಿ ಒಂದು ಶಾಲೆಯಿಂದ ಒಬ್ಬ ವಿದ್ಯಾರ್ಥಿಯ ಪ್ರಬಂಧ ಆಯ್ಕೆ ಮಾಡಿ ಉಲ್ಲೇಖಿತ ವಿಳಾಸಕ್ಕೆ ಕಳುಹಿಸುವುದು. ಆಯ್ಕೆಯಾದ ವಿದ್ಯಾರ್ಥಿಗೆ ಪ್ರಶಸ್ತಿ ಪತ್ರ ನೀಡಲಾಗುತ್ತದೆ. ತಮ್ಮ ವ್ಯಾಪ್ತಿಯ ಪ್ರೌಢಶಾಲೆಗಳಿಗೆ ಸೂಚಿಸುವಂತೆ ತಿಳಿಸಿದೆ. (ಸ್ಪರ್ದೆಯ ನಿಯಮಗಳ ಬಗ್ಗೆ ಪ್ರತಿ ಲಗತ್ತಿಸಿದೆ).

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ದ.ಕ. ಮಂಗಳೂರು

ರಿಗೆ

ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ

ಪ್ರತಿ:

|| Jai Gurudev ||

# ODIYOOR SHREE GURUDEVA VIDYAPEETAM

## Odiyoor Shree Gurudevadatta Samsthanam

### (Pre Primary, Primary and High School)

P.O.: ODIYOOR-574243, Karopady Village, Bantwal Tq, D.K. Karnakata (Tulunadu)

web: www.shreeodiyoor.org
Tel No: 08255-266850

email: shreegurudevakhs@gmail.com
Mobile No: 9895975237

॥ಜೈ ಗುರುದೇವ॥

ಪರಮಪೂಜ್ಯ ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿಗಳವರ ಹುಟ್ಟುಹಬ್ಬವು ಸಾಮಾಜಿಕ ಹಿತದ ಗ್ರಾಮ ಸ್ವಚ್ಚತೆ, ಆರ್ಥಿಕವಾಗಿ ಹಿಂದುಳಿದವರಿಗೆ ಮನೆ ನಿರ್ಮಾಣ, ಔಷಧೀಯ ಗಿಡ ಬೆಳೆಸುವಿಕೆ ಇನ್ನಿತ್ಯಾದಿ ಧ್ಯೇಯೋದ್ದೇಶಗಳೊಂದಿಗೆ ಹಲವಾರು ವರ್ಷಗಳಿಂದ **'ಗ್ರಾಮೋತ್ಸವ'** ವಾಗಿ ಆಚರಿಸಲ್ಪಡುತ್ತಿದೆ. ಈ ಪ್ರಯುಕ್ತ ಪ್ರಸಕ್ತ ವರ್ಷದಲ್ಲಿ ದಿನಾಂಕ 08/08/2018ರಂದು ಆಚರಿಸಲ್ಪಡುವ ಈ ಗ್ರಾಮೋತ್ಸವದಲ್ಲಿ ಮಕ್ಕಳಲ್ಲಿ ಸಾಮಾಜಿಕ ಜಾಗೃತಿಯನ್ನು ಉಂಟುಮಾಡುವ ನಿಟ್ಟಿನಲ್ಲಿ ಪ್ರೌಢಶಾಲಾ ಮಕ್ಕಳಿಗೆ (8ರಿಂದ 10ನೇತರಗತಿ) **'ದುಶ್ಚಟಮುಕ್ತ ಭಾರತ – ವಿದ್ಯಾರ್ಥಿಗಳ ಪಾತ್ರ'** ಈ ವಿಷಯದ ಕುರಿತು ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸುವುದಾಗಿ ನಿರ್ಧರಿಸಿದ್ದೇವೆ.

**ಸ್ಪರ್ಧೆಯ ನಿಯಮಗಳು :**

- ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಪುಟಗಳಿಗೆ ಮೀರದಂತೆ (A4 SIZE) ಬರೆದು ಮೇಲೆ ಕಾಣಿಸಿದ ವಿಳಾಸಕ್ಕೆ ಕಳುಹಿಸುವುದು.
- ಒಂದು ಶಾಲೆಯಿಂದ ಒಬ್ಬ ವಿದ್ಯಾರ್ಥಿಗೆ ಮಾತ್ರ ಅವಕಾಶ.
- ಆಯ್ಕೆಯಾದ ಅತ್ಯುತ್ತಮ ಪ್ರಬಂಧಗಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ದಿನಾಂಕ 08/08/2018 ನೇ ಬುಧವಾರ ಗ್ರಾಮೋತ್ಸವದ ಸಭಾವೇದಿಕೆಯಲ್ಲಿ ನೀಡಲಾಗುವುದು
- ನೀವು ಕಳುಹಿಸುವ ಪ್ರಬಂಧಗಳ ಮೇಲೆ ವಿದ್ಯಾರ್ಥಿಯ ಹೆಸರು, ತರಗತಿಯೊಂದಿಗೆ ಮುಖ್ಯೋಪಾಧ್ಯಾಯರ ಮೊಹರು ಮತ್ತು ಸಹಿ ಸ್ಪಷ್ಟವಾದ ವಿಳಾಸ, ದೂರವಾಣಿ ಸಂಖ್ಯೆಯನ್ನು ನಮೂದಿಸಿ.
- ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು.
- ದಿನಾಂಕ 20/07/2018 ರ ಒಳಗಾಗಿ ನಿಮ್ಮ ಪ್ರಬಂಧವನ್ನು ಕಳುಹಿಸಿಕೊಡಿ.